**1 ನೇ ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ಹುಣಸೂರು.**

**ಸಿ.ಸಿ. ಸಂಖ್ಯೆ: 1056/2024**

**ಸಾಕ್ಷಿಯನ್ನು ದಿಃ 09.01.2026 ರಂದು ಕರೆಸಿ ಪ್ರಮಾಣವಚನ ಭೋದಿಸಲಾಯಿತು.**

| | | | |
|---|---|---|---|
| ಹೆಸರು | ಸ್ವಾಮಿನಾಯಕ | ಸಿಡಬ್ಲ್ಯೂ:13 | ಪಿಡಬ್ಲ್ಯೂ:6 |
| ತಂದೆಯ ಹೆಸರು | ಲೇಟ್ ಕಾಳನಾಯಕ | | |
| ವಯಸ್ಸು | 53 ವರ್ಷ | | |
| ಕೆಲಸ | ಪಿ.ಎಸ್.ಐ ಕೆ.ಆರ್. ನಗರ | | |
| ವಾಸಸ್ಥಳ | ಹೊಸರಾಮನಹಳ್ಳಿ, ಹುಣಸೂರು | | |

**ಮುಖ್ಯ ವಿಚಾರಣೆಃ ಮಾನ್ಯ ಸಸಅ ರವರಿಂದಃ**

ನಾನು 2019 ರಿಂದ 2021ರ ವರೆಗೆ ಬಿಳಿಕೆರೆ ಪೊಲೀಸ್ ಠಾಣೆಯಲ್ಲಿ ಎ.ಎಸ್.ಐ.ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ 09.05.2020 ರಂದು ನಾನು ಠಾಣಾ ಉಸ್ತುವಾರಿಯಲ್ಲಿದ್ದಾಗ ಮಧ್ಯಾಹ್ನ 1.00 ರ ಸಮಯದಲ್ಲಿ ಚಾಸಾ 1 ರವರು ಠಾಣೆಗೆ ಹಾಜರಾಗಿ ನೀಡಿದ ಲಿಖಿತ ದೂರನ್ನು ಸ್ವೀಕರಿಸಿ ಠಾಣಾ ಮೊಕದ್ದಮೆ ಸಂಖ್ಯೆ 114/20 ರಲ್ಲಿ ಕಲಂ 279, 337 ಐಪಿಸಿ ಅಡಿಯಲ್ಲಿ ಪ್ರಕರಣ ದಾಖಲಿಸಿಕೊಂಡು ಪ್ರ.ವ.ವರದಿಯನ್ನು ಮಾನ್ಯ ನ್ಯಾಯಾಲಯಕ್ಕೂ ಮತ್ತು ಮೇಲಾಧಿಕಾರಿಗಳಿಗೂ ನಿವೇದಿಸಿಕೊಂಡಿರುತ್ತೇನೆ. ನಿಪಿ. 1 ರ ದೂರಿನಲ್ಲಿರುವ ಸಾಕ್ಷಿ ಸಹಿಯನ್ನು ನೋಡಿ ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ. 1(ಬಿ) ಎಂದು ಗುರುತಿಸಲಾಯಿತು. ಪ್ರ.ವ.ವರದಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ನಿಪಿ. 12 ಎಂದು, ಸಾಕ್ಷಿಯ ಸಹಿಯನ್ನು ನಿಪಿ. 12(ಎ) ಎಂದು ಗುರುತಿಸಲಾಯಿತು.

ಅದೆ ದಿನ ನಾನು 3.30 ರ ಸಮಯಕ್ಕೆ ಕೃತ್ಯ ನಡೆದ ಸ್ಥಳಕ್ಕೆ ಭೇಟಿ ನೀಡಿ ಚಾಸಾ 2 ರವರು ತೋರಿಸಿದ ಸ್ಥಳದಲ್ಲಿ ಚಾಸಾ 4 ಮತ್ತು 5 ರವರ ಸಮಕ್ಷಮ ಸ್ಥಳ ಮಹಜರ ಕ್ರಮ ಜರುಗಿಸಿರುತ್ತೇನೆ. ಸ್ಥಳದಲ್ಲಿ ಅಪಘಾತ ಉಂಟು ಮಾಡಿದ ವಾಹನ ಸಂಖ್ಯೆ ಕೆ ಎ 41 ಇ ಎಂ. 4989 ಸಿ.ಟಿ. 100 ಬೈಕ್ ಅನ್ನು ಅಮಾನತ್ತು ಪಡಿಸಿಕೊಂಡು ಅದೆ ಸಮಯದಲ್ಲಿ ಸ್ಥಳದಲ್ಲಿದ್ದ ಚಾಮಶೆಟ್ಟಿರವರ ಹೇಳಿಕೆ ಪಡೆದುಕೊಂಡೆ ಎಂದು ಹೇಳಿದ್ದು, ಈ ಹಂತದಲ್ಲಿ ಮಾನ್ಯ ಸಸಅ ರವರು ಕಡತ ನೋಡಿ ಸರಿಯಾಗಿ ಹೇಳಿ ಎಂದಾಗ ಚಾಸಾ 2 ಮತ್ತು 3 ರವರ ಹೇಳಿಕೆ ಪಡೆದುಕೊಂಡೆ ಎಂದು ಹೇಳಿರುತ್ತಾರೆ. ನಂತರ ನಿಪಿ. 2 ರ ಸ್ಥಳ ಮಹಜರ್ ಮತ್ತು ನಿಪಿ. 3 ರ ವಾಹನಗಳನ್ನು ನೋಡಿ ಗುರುತಿರುತ್ತಾರೆ. ಅದೆ ದಿನ ಸ್ಥಳದಲ್ಲಿ ಕಚ್ಚಾ ನಕ್ಷೆಯನ್ನು ತಯಾರಿಸಿರುತ್ತೇನೆ. ಸಾಕ್ಷಿ ನಕ್ಷೆಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ. 2(ಡಿ) ಎಂದು ಗುರುತಿಸಲಾಯಿತು. ಮಹಜರ್ ಮೇಲಿರುವ ಸಾಕ್ಷಿಯ ಸಹಿಯನ್ನು ನಿಪಿ. 5(ಡಿ) ಗುರುತಿಸಲಾಯಿತು. ಠಾಣಾ ಮಾಲು ಪಟ್ಟಿ ಸಂಖ್ಯೆ 99/20 ರಲ್ಲಿ ನಮೂದಿಸಿ ಮಾನ್ಯ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ. ದಿಃ 18.05.2020 ರಂದು ಆರೋಪಿಗೆ ಸಿ.ಆರ್.ಪಿ.ಸಿ ಕಲಂ 41 ರ ಅಡಿಯಲ್ಲಿ ನೊಟೀಸು ನೀಡಿ ಸೂಕ್ತ ಜಾಮೀನಿನ ಮೇಲೆ ಬಿಡುಗಡೆ ಗೊಳಿಸಿರುತ್ತೇನೆ. ಅದೆ ಸಮಯದಲ್ಲಿ ಆರೋಪಿಗೆ ಐ.ವಿಂ.ವಿ ಕಾಯಿಂದೆ ಕಲಂ 133 ಅಡಿಯಲ್ಲಿ ನೊಟೀಸು ನೀಡಿ ಅವರಿಂದ ದಾಖಲೆ ಮತ್ತು ಉತ್ತರವನ್ನು ಪಡೆದು ಇಂಡಿಮ್ನಿಟಿ ಬಾಂಡ್ ಪಡೆದು ಅವರಿಗೆ ವಾಹನವನ್ನು ಬಿಡುಗಡೆ ಮಾಡಿರುತ್ತೇನೆ . ಸಾಕ್ಷಿಯ ಐ.ಎಂ.ವಿ ಕಾಯಿದೆ 133 ರ ನೊಟೀಸು ಅದಕ್ಕೆ ನೀಡಿದ ಉತ್ತರ ಮತ್ತು ಇಂಡಿಮ್ನಿಟಿ ಬಾಂಡ್ ಅನ್ನು ನೋಡಿ ಗುರುತಿಸಿದ್ದು, ಅವುಗಳನ್ನು ಕ್ರಮವಾಗಿ ನಿಪಿ. 13 ರಿಂದ 15 ಎಂದು, ಸಾಕ್ಷಿಯ ಸಹಿಗಳನ್ನು ನಿಪಿ. 13(ಎ) ಯಿಂದ 15(ಎ) ಎಂದು ಗುರುತಿಸಲಾಯಿತು. ನಂತರ ಮುಂದಿನ ತನಿಖೆಗಾಗಿ ಈ ಪ್ರಕರಣವನ್ನು ಚಾಸಾ 18 ರವರಿಗೆ ನೀಡಿರುತ್ತೇನೆ. ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ ಆರೋಪಿ ಇಂದು ಗೈರು ಹಾಜರಾಗಿದ್ದು ಆರೋಪಿ ಪರ ವಕೀಲರು ಆರೋಪಿಯನ್ನು ಗುರುತಿಸಿ ಎಂದು ತಕರಾರು ಇಲ್ಲ ಎಂದು ತಿಳಿಸಿರುತ್ತಾರೆ.

**(ಈ ಹಂತದಲ್ಲಿ ಮಾನ್ಯ ಸಸಅ ರವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ಕೋರಿರುತ್ತಾರೆ. ಸಾಕ್ಷಿ ತನ್ನ ಸಾಕ್ಷ್ಯವನ್ನು ಅಭಿಯೋಜನೆಗೆ ಪ್ರತಿಕೂಲವಾಗಿ ನುಡಿದಿರುವ ಕಾರಣ ಅವರನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿಸಲಾಯಿತು)**

**ಪಾಟೀಸವಾಲು ಸಸಅ ರವರಿಂದಃ–**

**ಪಾಟೀಸವಾಲುಃ ಆರೋಪಿ ಪರ ಶ್ರೀ ಸಿ.ಎಸ್ ವಕೀಲರಿಂದಃ**

ನಿಪಿ. 1 ರ

ಅರ್ಜಿದಾರರಿಗೆ ಪರಿಹಾರ ಪಡೆಯಲು ಅನುಕೂಲವಾಗಲಿ ಎಂದು ಆರೋಪಿ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಿಕೊಂಡು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲಃ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೇ.ಸ.ಇದೆ.,

(ಭಾಗ್ಯಮ್ಮ)
1 ನೇ ಹೆಚ್ಚುವರಿ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ.ಹುಣಸೂರು.